
# ಗಟ್ಟಿಗಿತ್ತಿ ಜೋಲಿ



ಸಾಮಾಜಿಕ ಜಾಲತಾಣಗಳಲ್ಲಿ ಹಾಲಿವುಡ್ ನಟಿ, ಏಂಜೆಲಿನಾ ಜೋಲಿಯ ಕುರಿತು ಒಂದೇ ಸಮನೆ ಹೊಗಳಿಕೆಯ ಹೊನ್ನಮಳೆಯಾಗುತ್ತಿದೆ. ಟ್ವೀಟ್‌ಲೋಕದಲ್ಲಿ ಜೋಲಿಯದ್ದೇ ಸುದ್ದಿ. ಅದಕ್ಕೆ ಕಾರಣ ಆಕೆ ಮಾಡಿಸಿಕೊಂಡಿರುವ ಹೊಸ ಸರ್ಜರಿ. 'ನ್ಯೂಯಾರ್ಕ್ ಟೈಮ್ಸ್'ನ ಸೆಲೆಬ್ರಿಟಿ ಕಾಲಂನಲ್ಲಿ ಏಂಜೆಲಿನಾ ತನ್ನ ಇತ್ತೀಚಿನ ಸರ್ಜರಿಯ ಬಗ್ಗೆ ಬರೆದುಕೊಂಡಿದ್ದಾಳೆ. 'ಇತ್ತೀಚೆಗಷ್ಟೇ ರಕ್ತಪರೀಕ್ಷೆಯೊಂದರಲ್ಲಿ ಕಂಡುಬಂದ ಕಲೆಯೊಂದು ನನಗೆ ಗರ್ಭಕೋಶದ ಕ್ಯಾನ್ಸರ್ ಸಾಧ್ಯತೆಯನ್ನು ಸೂಚಿಸಿತ್ತು. ನನ್ನ ಬಿಆರ್‌ಸಿಎ 1 ಜೀವಾಣುವಿನಲ್ಲಿ ವ್ಯತ್ಯಾಸ ಗುರುತಿಸಿದ ವೈದ್ಯರು ಸರ್ಜರಿಯ ಮೂಲಕ ಕಳೆದ ವಾರ ನನ್ನ ಅಂಡಾಶಯ ಮತ್ತು ಡಿಂಬನಾಳವನ್ನು ತೆಗೆದುಹಾಕಿದ್ದಾರೆ' ಎಂದಿದ್ದಾಳೆ ಜೋಲಿ.

ಎರಡು ವರ್ಷಗಳ ಹಿಂದೆ, ಸ್ತನ ಕ್ಯಾನ್ಸರ್ ತಡೆಯಲು ಎರಡೂ ಸ್ತನಗಳನ್ನು ಸರ್ಜರಿ ಮೂಲಕ ತೆಗೆಸಿಕೊಂಡಿರುವ ಜೋಲಿ, ಈಗ ಕ್ಯಾನ್ಸರ್ ವಿರುದ್ಧ ಮಹಾ ಸಮರವನ್ನೇ ಸಾರಿದಂತಾಗಿದೆ. 'ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುವ ಅನೇಕ ಸೆಲೆಬ್ರಿಟಿಗಳಿದ್ದಾರೆ. ಆದರೆ ಅವರದನ್ನು ಬಹಿರಂಗ ಪಡಿಸುವುದಿಲ್ಲ. ತಮ್ಮ ರೋಗ ಜಗತ್ತಿಗೆ ಗೊತ್ತಾದರೆ ಸ್ಟಾರ್‌ಗಿರಿಗೆ ಎಲ್ಲಿ ಸಂಚಕಾರ ಬರುತ್ತದೋ ಎನ್ನುವ ಭಯ. ಆದರೆ ಏಂಜೆಲಿನಾ ಜೋಲಿ ಎಲ್ಲರಂತಲ್ಲ. ತನ್ನ ರೋಗ ಮತ್ತು ಅದರ ಚಿಕಿತ್ಸೆಯ ಬಗ್ಗೆ ಮುಕ್ತವಾಗಿ ಅಭಿಪ್ರಾಯ ಹಂಚಿಕೊಳ್ಳುವ ಮೂಲಕ ಜಗತ್ತಿನಲ್ಲಿ ಈ ರೀತಿಯ ರೋಗಗಳಿಂದ ಬಳಲುತ್ತಿರುವ ಸಾವಿರಾರು ಮಹಿಳೆಯರಲ್ಲಿ ಧೈರ್ಯ ತುಂಬಿದ್ದಾರೆ' ಎನ್ನುವುದು ಸಾಮಾಜಿಕ ಜಾಲತಾಣಗಳಲ್ಲಿ ವ್ಯಕ್ತವಾಗಿರುವ ಸಾಮೂಹಿಕ ಅಭಿಪ್ರಾಯ.

ಹಾಲಿವುಡ್ ತಾರೆಯರಲ್ಲೇ ಅತ್ಯಂತ ಹೆಚ್ಚು ಸುದ್ದಿ ಮಾಡುತ್ತಿರುವಾಕೆ ಈ ಜೋಲಿ. 'ಯೂಗೌ' ಎನ್ನುವ ಪತ್ರಿಕೆಯೊಂದು 23 ದೇಶಗಳಲ್ಲಿ ಇತ್ತೀಚೆಗೆ ನಡೆಸಿದ ಸಮೀಕ್ಷೆಯಲ್ಲಿ '2015ರಲ್ಲಿ ಅತ್ಯಧಿಕ ಪ್ರಶಂಸೆ ಪಡೆಯುತ್ತಿರುವ ಜಾಗತಿಕ ಮಹಿಳೆ' ಎಂದು ಜೋಲಿಯನ್ನು ಗುರುತಿಸಿದೆ. ಕಳೆದ ಹಲವು ವರ್ಷಗಳಿಂದ ಈಕೆ ಜಗತ್ತಿನ ಅತಿ ಜನಪ್ರಿಯ ಸೆಕ್ಸ್ ಸಿಂಬಲ್! ಅಮೆರಿಕದ ಬಹುತೇಕ ಪುರುಷರು ಈಕೆಯ ಸಖ್ಯ ಬಯಸುತ್ತಾರೆ; ಹಾಗೆಯೇ ಬಹುತೇಕ ಮಹಿಳೆಯರು ಈಕೆಯಂತಾಗಲು ಬಯಸುತ್ತಾರೆ! ಒಂದು ಕಾಲದಲ್ಲಿ ಹೀಗೆ ಪುರುಷರು ಮತ್ತು ಸ್ತ್ರೀಯರನ್ನು ಬೇರೆಯೇ ಕಾರಣಕ್ಕೆ ಸೆಳೆದ ಈಕೆಯ ದೇಹ, ಈಗ ಪದೇ ಪದೇ ವೈದ್ಯಲೋಕದ ಕತ್ತರಿಗೆ ಈಡಾಗುತ್ತಿರುವುದು ದುಃಖದ ಸಂಗತಿಯೂ ಹೌದು. ಆದರೆ ಬದುಕಿನ ಈ ಎಲ್ಲ ಅಡತಡೆಗಳನ್ನೂ ಜೋಲಿ, ತನ್ನ ಪರವಾದ ಸಂಗತಿಯನ್ನಾಗಿ ಪರಿವರ್ತಿಸುತ್ತಿರುವುದು ಕುತೂಹಲಕರ. ಅದಕ್ಕೆ ಕಾರಣ ಆಕೆಯ ಸಮಚಿತ್ತ. 'ನಾನು ಸರ್ಜರಿ ಮಾಡಿಸಿಕೊಂಡಿದ್ದೇನೆಂದು ನೀವೂ ಮಾಡಿಸಿಕೊಳ್ಳಬೇಕಿಲ್ಲ. ಏಕೆಂದರೆ ಈ ರೋಗವನ್ನು ಪರ್ಯಾಯ ಚಿಕಿತ್ಸೆ ಮತ್ತು ನಿಯಮಿತ ಚೆಕಪ್ ಮೂಲಕವೂ ತಡೆಯಬಹುದು. ಕಷ್ಟಗಳು ಬಂದಾಗ ಹೆದರಬೇಡಿ. ವೈದ್ಯರ ಜತೆ ಮುಕ್ತವಾಗಿ ಮಾತನಾಡಿ' ಎನ್ನುವುದು ಈಕೆಯ ಹಿತವಚನ.

ಕ್ಯಾನ್ಸರ್ ಜೋಲಿ ಕುಟುಂಬಕ್ಕೆ ಹಳೇ ಗೆಳತಿ. ಈಕೆಯ ಅಜ್ಜಿ, ಚಿಕ್ಕಮ್ಮ ಮತ್ತು ಅಮ್ಮ ತೀರಿಕೊಂಡದ್ದು ಕ್ಯಾನ್ಸರ್‌ನಿಂದಲೇ. ಗರ್ಭಾಶಯದ ಕ್ಯಾನ್ಸರ್‌ನ ಖಚಿತ ಪತ್ತೆಗೆ ಸೂಕ್ತ ವೈದ್ಯಕೀಯ ವಿಧಾನಗಳಿಲ್ಲ. ಈ ಕ್ಯಾನ್ಸರ್ ಆರಂಭಿಕ ಹಂತದಲ್ಲೇ ಪತ್ತೆಯಾಗಿರುವ ಪ್ರಕರಣಗಳು ಶೇಕಡಾ 15ರಷ್ಟೇ ಇವೆ. ಆರಂಭಿಕ ಹಂತದಲ್ಲೇ ಚಿಕಿತ್ಸೆ ಮಾಡಿದರೆ ಹೆಚ್ಚು ಬದುಕುವ ಸಾಧ್ಯತೆ ಶೇಕಡಾ 92ರಷ್ಟು. ಆದರೆ ಒಮ್ಮೆ ದೇಹದಲ್ಲಿ ಹರಡಲು ಶುರುವಾದರೆ, ಬಳಿಕ ಬದುಕುವ ಸಾಧ್ಯತೆ ಶೇಕಡಾ 27ರಷ್ಟಕ್ಕೆ ಇಳಿಯುತ್ತದೆ. ಹಾಗಾಗಿ ಊಫೊರೆಕ್ಟಮಿ ಮಾಡಿಸಿ–ಕೊಂಡಳಂತೆ. ಈಕೆಯ ತಾಯಿಗೆ ಕ್ಯಾನ್ಸರ್ ಚಿಕಿತ್ಸೆ ನಡೆಸಿದ ವೈದ್ಯರ ಬಳಿಗೇ ಈಕೆ ಹೋಗಿದ್ದಳಂತೆ. ಅದನ್ನು ನೆನಪಿಸಿಕೊಂಡು ಇಬ್ಬರೂ ಹನಿಗಣ್ಣಾದರಂತೆ.

ವರ್ಷದ ಆರಂಭದಲ್ಲಿ ತನ್ನ 'ಅನ್‌ಬ್ರೋಕನ್' ಚಿತ್ರದ ನಿರ್ದೇಶನಕ್ಕೆ ಆಸ್ಕರ್ ಪ್ರಶಸ್ತಿ ನಾಮಕರಣ ಆಗದೆ ನಿರಾಶೆ ಹೊಂದಿದ್ದಳು ಜೋಲಿ. 14ರ ಎಳವೆ–ಯಲ್ಲೇ ಬಾಯ್‌ಫ್ರೆಂಡ್ ಜತೆ ಕೂಡಿಕೆ ಮಾಡಿಕೊಂಡು, ತನ್ನ ತಾಯಿಯ ಮನೆಯಲ್ಲೇ ಆತನೊಡನೆ ವಾಸವಾಗಿ ಸುದ್ದಿ ಮಾಡಿದ್ದ ಸುರಸುಂದರಿಯೀಕೆ. ಈಗ 39ರ ಹರೆಯ ತಲುಪಿ, ಆರು ಮಕ್ಕಳ ತಾಯಿಯಾಗಿದ್ದರೂ (ಮೂವರು ಸಾಕು ಮಕ್ಕಳು) ಸುದ್ದಿಮನೆ ಈಕೆಯ ಬೆನ್ನು ಬಿಟ್ಟಿಲ್ಲ. ಈ ಹೊಸ ಶಸ್ತ್ರಚಿಕಿತ್ಸೆ–ಯಿಂದ ತಾಯಿಯಾಗುವ ಭಾಗ್ಯ ಕಳೆದುಕೊಂಡಿರುವುದು ಮಾತ್ರವಲ್ಲ; ಮೂಳೆ, ಹೃದಯದ ಮತ್ತು ಮಾನಸಿಕ ಕಾಯಿಲೆಗಳು ಬರುವ ರಿಸ್ಕ್ ಕೂಡಾ ಇದೆಯಂತೆ. ಆದರೆ ಅದನ್ನು ನಿಯಮಿತ ಚೆಕಪ್‌ನಿಂದ ಎದುರಿಸುತ್ತೇನೆ ಎಂದಿದ್ದಾಳೆ. ಈ ದಿಟ್ಟತನವೇ ಈಕೆಯನ್ನು ಹಾಲಿವುಡ್‌ನ ಅತ್ಯಂತ ಪ್ರಭಾವಶಾಲಿ ಮಹಿಳೆಯನ್ನಾಗಿಸಿದೆ. 2009ರಿಂದಲೂ ಹಾಲಿವುಡ್‌ನ ಅತ್ಯಂತ ಅಧಿಕ ಆದಾಯ ಗಳಿಸುವ ನಟಿಯೀಕೆ. 2013ರಲ್ಲಿ ವಾರ್ಷಿಕ 33 ದಶಲಕ್ಷ ಡಾಲರ್ ಆದಾಯ ಗಳಿಸಿರುವ ಜೋಲಿ, ಬಹುಪಾಲು ಹಣವನ್ನು ಚಾರಿಟಿಗೆ ಬಳಸುತ್ತಿರುವುದು ಉಳಿದ ತಾರೆಯರಿಗೆ ಮಾದರಿಯೂ ಹೌದು.

ಒಂದು ಪ್ರಶ್ನೆಯಂತೂ ಹಾಗೆಯೇ ಉಳಿಯುತ್ತದೆ. ಮುಂದೊಂದು ದಿನ ಕಾಡಬಹುದಾದ ವ್ಯಾಧಿಯನ್ನು ಬರದಂತೆ ತಡೆಯುವುದಕ್ಕಾಗಿ, ದೇಹವನ್ನೇ ಸರ್ಜನ್ನರ ಪ್ರಯೋಗಶಾಲೆಯನ್ನಾಗಿ ಮಾಡಿಕೊಳ್ಳುವುದು ಎಷ್ಟು ಸರಿ? ಎಲ್ಲ ಸರ್ಜರಿಯ ಹೊರತಾಗಿಯೂ ಮತ್ತೊಂದು ರೀತಿಯ ಕ್ಯಾನ್ಸರ್ ಬಂದರೆ, ಇದರಿಂದ ಜಗತ್ತಿಗೆ ಸಿಗುವ ಸಂದೇಶವೇನು? ಹಾಗಾಗದಿರಲಿ ಎಂದು ಹಾರೈಸೋಣ. ■

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65